PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE 29-10-20

### ವಿಧಾನ ಪರಿಷತ್‌ನ ನಾಲ್ಕು ಕ್ಷೇತ್ರಗಳಲ್ಲಿ ವೋಟಿಂಗ್ | ಕರೊನಾ ಭೀತಿ ಹಿಮ್ಮೆಟ್ಟಿಸಿದ ಅತ್ಯುತ್ಸಾಹ ತೋರಿದ ಮತದಾರ

# ಮೇಲ್ಮನೆಗೆ ಬಿರುಸಿನ ಮತದಾನ, ಪೆಟ್ಟಿಗೆಯಲ್ಲಿ ಭವಿಷ್ಯ ಅಡಕ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ವಿಧಾನ ಪರಿಷತ್ 4 ಕ್ಷೇತ್ರಗಳ ದ್ವೈವಾರ್ಷಿಕ ಚುನಾವಣೆಗೆ ಏರ್ಪಟ್ಟ ತುರುಸಿನ ಸ್ಪರ್ಧೆಗೆ ತಕ್ಕಂತೆ ಬುಧವಾರ ಬಿರುಸಿನ ಶೇ.71.11 ಮತದಾನ ಶಾಂತಿಯುತವಾಗಿ ನೆರವೇರಿದ್ದು, ಬಹಳ ಉಮೇದಿಯಿಂದಲೇ ಓಡಾಡಿದ್ದ ಅಭ್ಯರ್ಥಿ ಎದೆ ಬಡಿತವೂ ಹೆಚ್ಚಿಸಿದೆ.

ಬೆಳಗ್ಗೆ ಮಂದಗತಿಯಲ್ಲೇ ಶುರುವಾಗಿದ್ದ ಮತದಾನ ಹೊತ್ತೇರುತ್ತಿದ್ದಂತೆ ಚುರುಕಾಗಿದೆ. ಕರೊನಾ ಭೀತಿಯನ್ನು ಹಿಮ್ಮೆಟ್ಟಿಸಿದ ಮತದಾರರ ಅತ್ಯುತ್ಸಾಹ ಈ ಬಾರಿ ಹೊಸ ದಾಖಲೆಯನ್ನು ಸೃಷ್ಟಿಸಿದೆ. ಒಟ್ಟಾರೆ ಶೇ.71.11 ಮತದಾನವಾಗಿದೆ. 4 ಕ್ಷೇತ್ರಗಳಿಗೆ 40 ಅಭ್ಯರ್ಥಿಗಳು ಸ್ಪರ್ಧಿಸಿದ್ದು, ಒಟ್ಟು 2,34,718 ಮತದಾರರಿದ್ದಾರೆ.

**ಮತ್ತೊಮ್ಮೆ ಅದೃಷ್ಟ ಪರೀಕ್ಷೆ:** ಕಳೆದ ಅವಧಿಯಲ್ಲಿ ಮೇಲ್ಮನೆಯನ್ನು ಪ್ರತಿನಿಧಿಸಿದ್ದ ಬಿಜೆಪಿಯ ಎಸ್.ವಿ.ಸಂಕನೂರು (ಪಶ್ಚಿಮ ಪದವೀಧರ ಕ್ಷೇತ್ರ), ಜೆಡಿಎಸ್‌ನ ಆರ್.ಚೌಡರೆಡ್ಡಿ ತೂಪಲಿ (ಆಗ್ನೇಯ ಪದವೀಧರ) ಹಾಗೂ ಕಾಂಗ್ರೆಸ್‌ನ ಶರಣಪ್ಪ ಮಟ್ಟೂರು (ಈಶಾನ್ಯ ಶಿಕ್ಷಕರ ಕ್ಷೇತ್ರ) ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ.



ವಿಜಯವಾಣಿ ಚಿತ್ರ

**ವಿಧಾನ ಪರಿಷತ್ ಆಗ್ನೇಯ ಪದವೀಧರರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಚಿತ್ರದುರ್ಗ ತಾಲೂಕು ಭರಮಸಾಗರದಲ್ಲಿ ಮತ ಚಲಾಯಿಸಿದ ಸಾಣೇಹಳ್ಳಿ ಶಾಖಾ ಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ.**

ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದ ಪುಟ್ಟಣ್ಣ 4ನೇ ಬಾರಿ ಆಯ್ಕೆ ಬಯಸಿದ್ದು, ಹಿಂದಿನ ಅವಧಿಯಲ್ಲಿ ಜೆಡಿಎಸ್‌ನಿಂದ ಗೆದ್ದವರು, ಈ ಬಾರಿ ಬಿಜೆಪಿಯಿಂದ ಸ್ಪರ್ಧಾ ಅಖಾಡಕ್ಕೆ ಧುಮುಕಿದ್ದಾರೆ.

**ಪ್ರತಿಷ್ಠೆಯ ಪಣ:** ಆಡಳಿತಾರೂಢ ಭಾರತೀಯ ಜನತಾಪಕ್ಷಕ್ಕೆ ವಿಧಾನ ಪರಿಷತ್‌ನ ತನ್ನ ಸಂಖ್ಯಾ ಬಲ ವೃದ್ಧಿಸಿಕೊಳ್ಳುವುದು ಮುಖ್ಯವಾಗಿದೆ. ಹಾಗೆಯೇ ಪ್ರತಿಪಕ್ಷ ಕಾಂಗ್ರೆಸ್‌ಗೆ ವರ್ಚಸ್ಸು ಮರುಸ್ಥಾಪಿಸುವ ಹುಮ್ಮಸ್ಸಿದ್ದರೆ, ಜೆಡಿಎಸ್‌ಗೆ ತನ್ನ ಬಲ ಸಾಬೀತುಪಡಿಸುವ ಛಲವಿದೆ. ಹೀಗಾಗಿ 3 ಪ್ರಮುಖ ಪಕ್ಷಗಳು ಪ್ರತಿಷ್ಠೆ ಪಣಕ್ಕಿಟ್ಟು ಸೆಣಸಾಡಿವೆ.

ಕರೊನಾ ದಿಗಿಲಿನಿಂದ ಮತದಾರರು ಮತಗಟ್ಟೆಗೆ ಬರಲು ಹಿಂಜರಿಯಬಹುದು ಎನ್ನುವ ಅಳುಕು ಹುಸಿಯಾಗಿದೆ. ಬದಲಿಗೆ ನಿರೀಕ್ಷೆಗೆ ಮೀರಿದ ಮತದಾನವಾಗಿರುವ ಕಾರಣ ಜಿದ್ದಾಜಿದ್ದಿಗೆ ಇಳಿದ ಪಕ್ಷಗಳ ಕುತೂಹಲ, ಅಭ್ಯರ್ಥಿಗಳಲ್ಲಿ ಡವಡವ ಹೆಚ್ಚಿಸಿರುವುದು ಸಹಜ. ನವೆಂಬರ್ 2ರಂದು ಮತ ಎಣಿಕೆ ನಡೆಯಲಿದೆ.

## ಮತಗಟ್ಟೆ ಪ್ರವೇಶಿಸಿದ ಹರಿಹರ ಶಾಸಕ

**ಮಲೇಬೆನ್ನೂರು (ದಾವಣಗೆರೆ):** ಮತದಾರರಲ್ಲದಿದ್ದರೂ ಆಗ್ನೇಯ ಪದವೀಧರ ಕ್ಷೇತ್ರದ ಚುನಾವಣೆಯ ವೇಳೆ ಹರಿಹರದ ಕಾಂಗ್ರೆಸ್ ಶಾಸಕ ಎಸ್. ರಾಮಪ್ಪ ಮತಗಟ್ಟೆ ಪ್ರವೇಶ ಮಾಡಿ ಚರ್ಚೆಗೆ ಗ್ರಾಸವಾಗಿದ್ದಾರೆ. ಮಲೇಬೆನ್ನೂರು ಗ್ರಾಮದ ಜಿಗಳಿ ರಸ್ತೆಯ ಪದವಿಪೂರ್ವ ಕಾಲೇಜಿನ ಮತಗಟ್ಟೆಗೆ ಬುಧವಾರ ಮಧ್ಯಾಹ್ನ ತೆರಳಿದ ರಾಮಪ್ಪ, ಒಳಗೆ ಪ್ರವೇಶಿಸಿ, ಮತಗಟ್ಟೆ ಸಿಬ್ಬಂದಿಯಿಂದ ಮತದಾನದ ಕುರಿತು ಮಾಹಿತಿ ಪಡೆದರು. ಆಗ ಅವರು ಮಾಸ್ಕ್ ಕೂಡಾ ಹಾಕಿರಲಿಲ್ಲ ಎಂಬುದು ಗಮನಾರ್ಹ. ಜತೆಗೆ ಅವರ ಬೆಂಬಲಿಗರೂ ಇದ್ದರು.

| ಕ್ಷೇತ್ರವಾರು ಮತದಾನ ಪ್ರಮಾಣ | |
|---|---|
| ಪಶ್ಚಿಮ ಪದವೀಧರ ಕ್ಷೇತ್ರ | 70.11% (49.48%) |
| ಆಗ್ನೇಯ ಪದವೀಧರ ಕ್ಷೇತ್ರ | 74.84% (52.77%) |
| ಈಶಾನ್ಯ ಶಿಕ್ಷಕರ ಕ್ಷೇತ್ರ | 73.32% (60.30%) |
| ಬೆಂಗಳೂರು ಶಿಕ್ಷಕರ ಕ್ಷೇತ್ರ | 66.20% (44.91%) |

(ಆವರಣದಲ್ಲಿರುವುದು 2014ರ ಮತದಾನ ಪ್ರಮಾಣ)

## ಸಂಕಲ್ಪ ಶೆಟ್ಟರ್‌ಗೆ ಮತ ನಿರಾಕರಣೆ

**ಹುಬ್ಬಳ್ಳಿ:** ಸಚಿವ ಜಗದೀಶ ಶೆಟ್ಟರ್ ಪುತ್ರ ಸಂಕಲ್ಪ ಶೆಟ್ಟರ್ ಅವರಿಗೆ ಮತ ಚಲಾವಣೆಗೆ ಅವಕಾಶ ಸಿಗಲಿಲ್ಲ. ವಿಧಾನ ಪರಿಷತ್ ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಬುಧವಾರ ಮತ ಚಲಾವಣೆಗೆ ಅವರು ಸಚಿವ ಜಗದೀಶ್ ಶೆಟ್ಟರ್, ಎಂಎಲ್‌ಸಿ ಪ್ರದೀಪ ಶೆಟ್ಟರ್ ಹಾಗೂ ಬಿಜೆಪಿ ಮುಖಂಡರೊಂದಿಗೆ ಕೇಶ್ವಾಪುರ ಫಾತಿಮಾ ಪ್ರೌಢಶಾಲೆ ಮತಗಟ್ಟೆಗೆ ಆಗಮಿಸಿದ್ದರು. ಆದರೆ, ಮತದಾರರ ಪಟ್ಟಿಯಲ್ಲಿ ಅವರ ಹೆಸರು ಇರಲಿಲ್ಲ, ಈ ಕಾರಣಕ್ಕೆ ಅಧಿಕಾರಿಗಳು ಮತ ಚಲಾವಣೆಗೆ ಅವಕಾಶ ನೀಡಲಿಲ್ಲ.